SC No. 23/2024
PW.-03

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್.ಸಿ. 23/2024

| | | |
|---|---|---|
| ಸಾಕ್ಷಿದಾರರ ಹೆಸರು | ನಾಗರಾಜು ಜಿ.ಆರ್. | ಪ್ರಮಾಣ ವಚನ ಮಾಡಿದ ದಿನಾಂಕ: **23.09.2025** |
| ತಂದೆಯ/ಗಂಡನ ಹೆಸರು | ರಾಮಯ್ಯ | |
| ವಯಸ್ಸು | 56 ವರ್ಷ | |
| ವೃತ್ತಿ | ಟೈಲರಿಂಗ್ ಕೆಲಸ | ಫ್ರಾ.ಸಾಃ 03 |
| ವಾಸ ಸ್ಥಳ | ಗಂಗಾ ನಗರ, ಹಳೇ ಕೆಸರೆ ಮೈಸೂರು | ಚಾ.ಸಾಃ 10 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ನನ್ನ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ದಿನಾಂಕ 13.07.2023 ರ ಪಂಚನಾಮೆಯನ್ನು ತೋರಿಸಲಾಯಿತು. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ಈಗ್ಗೆ ಸುಮಾರು 1 ವರ್ಷದ ಹಿಂದೆ ನರಸಿಂಹ ರಾಜ ಪೊಲೀಸ್ ಠಾಣೆಯವರು ನನ್ನನ್ನು ಠಾಣೆಗೆ ಕರೆಸಿದ್ದರು ಮತ್ತು ಸಹಿ ಹಾಕು ಎಂದು ಹೇಳಿದ್ದರು ನಾನು ಸಹಿ ಹಾಕಿದ್ದೆ. ನನಗೆ ಠಾಣೆಯಲ್ಲಿ ಯಾರನ್ನು ತೋರಿಸಿರಲಿಲ್ಲ ಮತ್ತು ಯಾವುದೇ ವ್ಯಕ್ತಿ ನನ್ನನ್ನು ಯಾವುದೇ ಸ್ಥಳ ಕ್ಕೆ ಕರೆದುಕೊಂಡು ಹೋಗಿರುವುದಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ

ಗಿರವಿ ಚೀಟಿಯನ್ನಾಗಲೀ ಬಂಗಾರದ ಒಡವೆಗಳನ್ನಾಗಲಿ ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈಗ ಗಿರವಿ ಚೀಟಿಯನ್ನಾಗಲೀ ಅಥವಾ ಬಂಗಾರದ ಒಡವೆಗಳನ್ನಾಗಲಿ ನೇಡಿದರೆ ಗುರುತಿಸಲು ಆಗುವುದಿಲ್ಲ. ನಾನು ಈಗ ನೋಡುತ್ತಿರುವ ಫೋಟೋದಲ್ಲಿ ನಾನು ಇರುತ್ತೇನೆ. ಸಾಕ್ಷಿದಾರರು ನೊಡಿ ಗುರುತಿಸಿದ ಫೋಟೋಗಳಲ್ಲಿ ನಾನು ಇರುತ್ತೇನೆ. ಸಾಕ್ಷಿದಾರರು ನೋಡಿ ಗುರುತಿಸಿದ ಫೋಟೋಗಳನ್ನು ಕ್ರಮವಾಗಿ ನಿಪಿ-9 ಮತ್ತು 10 ಎಂದು ಗುರುತಿಸಲಾಯಿತು. ಆ ಎರಡು ಫೋಟೋಗಳನ್ನು ಪೊಲೀಸ್ ಠಾಣೆಯಲ್ಲಿ ತೆಗೆದಿದ್ದರು. ನಾನು ಈಗ ನೋಡುತ್ತಿರುವ ನಿಪಿ-3 ಮತ್ತು 4 ಫೋಟೋಗಳಲ್ಲಿ ಇರುವ ಬಂಗಾರದ ಒಡವೆಗಳನ್ನು ನಾನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ.

ನಾನು ಈಗ ನೋಡುತ್ತಿರುವ ಸಹಿ ನನ್ನ ಸಹಿ ಇರುತ್ತದೆ. ಸಾಕ್ಷಿದಾರರು ನೋಡಿ ಗುರುತಿಸಿದ ದಾಖಲೆ ಅಮಾನತ್ತು ಪಂಚನಾಮೆ ಇದ್ದು, ಅದನ್ನು ನಿಪಿ-11 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ನಿಪಿ-11 ರ ಡಿಯಲ್ಲಿ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ದಿನಾಂಕ 13.07.2023 ರಂದು ನರಸಿಂಹರಾಜ ಪೊಲೀಸ್ ಠಾಣೆಯ ಮೊ.ಸಂಖ್ಯೆ 52/2023 ರ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ದಸ್ತಗಿರಿ ಮಾಡಿದ್ದು ಆತನನ್ನು ನನಗೆ ತೋರಿಸಿ ಈಗ್ಗೆ 3 ತಿಂಗಳ ಹಿಂದೆ ಹಳೇ ಕೆಸರೆಯ ವಾಸಿ ಮಂಜುಳ ಎಂಬುವರ ಮನೆಗೆ ಬಿಸಿ ನೀರನ್ನು ಕೇಳಿದ್ದು ಅವರು ಬಿಸಿ ನೀರು ತರಲು ಒಳ ಹೋದಾಗ ಅವರಿಗೆ ಹಲ್ಲೆ ಮಾಡಿ ಚಿನ್ನದ ಸರ, ಓಲೆ, ಮಾಟಿ ಮತ್ತು ಡ್ರಾಪ್ಸ್ ಅನ್ನು ಕಿತ್ತುಕೊಂಡಿರುತ್ತಾನೆ ಮತ್ತು ಅವುಗಳನುನ ಗಿರವಿ ಇಟ್ಟಿರುವುದಾಗಿ ಹೇಳಿರುತ್ತಾನೆ ಅವನನ್ನು ಕರೆದುಕೊಂಡು ಹೋದರೆ ತೋರಿಸುತ್ತೇನೆ ಎಂದು ಹೇಳಿರುತ್ತಾನೆ ಆದ್ದರಿಂ ಪಂಚನಾಮೆಗೆ ಸಹಕರಿಸಬೇಕು ಎಂದು ಹೇಳಿ ನನಗೆ ನೊಟೀಸ್ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿತನು ಆತನ ಮನೆಗೆ ಕರೆದುಕೊಂಡು ಹೋಗಿ ಗಿರವಿ ಚೀಟಿಯನ್ನು ಹಾಜರುಪಡಿಸಿದ್ದ ಅದನ್ನು ಪೊಲೀಸರು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಮತ್ತು ಅದೇ ಆರೋಪಿತನು ಗಿರವಿ ಇಟ್ಟಿದ್ದ ಸುಹಾನ ಬ್ಯಾಂಕರ್ಸ್ ಮತ್ತು ಜಿವಲರ್ಸ್ ಅಂಗಡಿಗೆ ನನ್ನನ್ನು ಕರೆದುಕೊಂಡು ಹೋಗಿ ಆ ಅಂಗಡಿಯ ಮಾಲೀಕರನ್ನು ತೋರಿಸಿದ್ದು ಅವರು ಆರೋಪಿತನು ಗಿರವಿ ಇಟ್ಟಿದ್ದ ಬಂಗಾರದ ಒಡವೆಗಳನ್ನು ಹಾಜರುಪಡಿಸಿದ್ದರು ಅವುಗಳನ್ನು ಪೊಲೀಸರು ನನ್ನ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಈಗ ಓದಿ ಹೇಳಿದ ನಿಪಿ-12 ರಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿತನಿಗೆ ಸಹಾಯವಾಗಲೀ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿಗಳ ಪರ  ವಕೀಲರಿಂದ :</u>**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**<u>ಮರವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.